ತರೀಕೆರೆ ತಾಲ್ಲೂಕು ನೇರಲಕೆರೆ ಗ್ರಾಮದಲ್ಲಿ ಪಶುವೈದ್ಯ ಶಾಲೆಯನ್ನು ಪ್ರಾರಂಭಿಸುವುದು

ಶ್ರೀ ಬಿ. ಆರ್. ನೀಲಕಂಠಪ್ಪ (ಶ್ರೀ ಎನ್. ಗಂಗಾಧರ–ಶ್ರವಣಬೆಳಗೊಳ ಇವರ ಪರವಾಗಿ).— ಮಾನ್ಯ ಅಧ್ಯಕ್ಷರೇ, ಚಿಕ್ಕಮಂಗಳೂರಿನ ತರೀಕೆರೆ ತಾಲ್ಲೂಕಿನ ನೇರಕೆರೆ ಗ್ರಾಮಕ್ಕೆ ಪಶುವೈದ್ಯ ಶಾಲೆಯನ್ನು ೧೯೮೨–೮೩ರಲ್ಲಿ ಪ್ರಾರಂಭಿಸಲು ಅನುಮತಿ ಕೊಟ್ಟಿದ್ದು ಸರಿಯಷ್ಟೇ. ಈ ಅನುಮತಿಯನ್ನು ವಾಪಸ್ ಪಡೆದಿರುವುದು ಸರಕಾರದ ಗಮನಕ್ಕೆ ಬಂದಿರುವ ವಿಚಾರವಾಗಿದೆ. ಸರಕಾರದ ಆಜ್ಞೆಯನ್ನು ಸಾರ್ವಜನಿಕರು ಮತ್ತು ಗ್ರಾಮಸ್ಥರು ತಿಳಿಯದೇ ಅಲ್ಲಿ ಭವ್ಯವಾದ ಆಸ್ಪತ್ರೆಯ ಕಟ್ಟಡವನ್ನು ಕಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆ. ತಾವೂ ಸಹ ಅನೇಕಸಾರಿ ಇದನ್ನು ಪುನಃ ಪ್ರಾರಂಭಿಸಲು ಅನುಮತಿ ನೀಡುವುದಾಗಿ ಹೇಳಿರುತ್ತೀರಿ. ಅದನ್ನು ಯಾವಾಗ ಕಾರ್ಯಗತ ಮಾಡುತ್ತೀರಿ ? ಚಿಕ್ಕಮಗಳೂರು ಜಿಲ್ಲಾ ಪರಿಷತ್ತು ಪಶುವೈದ್ಯ ಶಾಲೆಯನ್ನು ಪುನಃ ನಿರ್ವಿಸಲು ಪ್ರಯತ್ನ ಪಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ತಿಳಿಸಿ. ಈ ಜಿಲ್ಲಾ ಪರಿಷತ್ ನಿರ್ಣಯವನ್ನು ಹಾಗೂ ತಾವು ಸದನದಲ್ಲೇ ಎರಡು ಮೂರು ಬಾರಿ–ಕೊಟ್ಟ ಆಶ್ವಾಸನೆಯನ್ನು ಯಾವಾಗ ಈಡೇರಿಸುತ್ತೀರಿ ?

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನಾ ಸಚಿವರು).—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ನೇರಕೆರೆ ಗ್ರಾಮಕ್ಕೆ ೧೯೮೨–೮೩ರಲ್ಲಿ ಒಂದು ಗ್ರಾಮೀಣ ಪಶುವೈದ್ಯ ಶಾಲೆ ಮಂಜೂರಾಗಿತ್ತು. ಆ ದಿನಗಳಲ್ಲಿ ಸಿಬ್ಬಂದಿಯ ಕೊರತೆಯಿದ್ದ ಕಾರಣ ಈ ಆದೇಶವನ್ನು ಅನುಷ್ಠಾನಕ್ಕೆ ತರಲಾಗಲಿಲ್ಲ. ನಾನು ಪಶುಸಂಗೋಪನಾ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡಮೇಲೆ, ಮಾನ್ಯ ಶಾಸಕರಾದ ನೀಲಕಂಠಪ್ಪನವರು ಈ ಪಶುವೈದ್ಯ ಶಾಲೆಯನ್ನು ಮಂಜೂರು ಮಾಡಿದ್ದಾರೆಯೇ ಎಂದು ಪ್ರಶ್ನೆಯನ್ನು ಹಾಕಿದ್ದರು ಹಾಗೂ ಇದೇ ನಿಯಮ ೫೫ರ ಪ್ರಕಾರ ಸಹ ಪ್ರಶ್ನೆಯನ್ನು ಕೇಳಿದ್ದರು. ಈ ಬಗ್ಗೆ ಸಿಬ್ಬಂದಿ ಪೂರೈಕೆಯಾದ ಮೇಲೆ ಅಲ್ಲಿ ಪಶುವೈದ್ಯ ಶಾಲೆಯನ್ನು ತೆರೆಯುವ ಬಗ್ಗೆ ಪರಿಶೀಲಿಸಲಾಗುವುದೆಂದು ತಿಳಿಸಲಾಗಿತ್ತು. ಆದರೆ ೧೯೮೭–೮೮ನೇ ಸಾಲಿನಲ್ಲಿ ಹೊಸ ಪಶುವೈದ್ಯ ಶಾಲೆಗಳನ್ನು ಸ್ಥಾಪಿಸುವ ಅಧಿಕಾರವು ಜಿಲ್ಲಾ ಪರಿಷತ್ತುಗಳೇ ಹೊಂದಿರುವುದರಿಂದ, ಇನ್ನು ಮುಂದೆ ಹೊಸ ಪಶುವೈದ್ಯ ಶಾಲೆಗಳನ್ನು ಆಯಾ ಜಿಲ್ಲಾ ಪರಿಷತ್ತಿನವರೇ ತಮ್ಮ ಯೋಜನೆಗಳಲ್ಲಿ ತೆರೆಯುವ ಬಗ್ಗೆ ಸೇರಿಸಬೇಕಾಗುತ್ತದೆ. ನೇರಳೀಕೆರೆ ಗ್ರಾಮದಲ್ಲಿ ಗ್ರಾಮೀಣ ಪಶುವೈದ್ಯ ಶಾಲೆ ಸ್ಥಾಪಿಸುವ ಬಗ್ಗೆ ಚಿಕ್ಕಮಗಳೂರು ಜಿಲ್ಲಾ ಪರಿಷತ್, ಜಿಲ್ಲೆಯ ಯೋಜನೆಯಲ್ಲಿ ಸೇರಿಸಿ, ಅಗತ್ಯವಾದ ಹಣವನ್ನು ಯೋಜನೆಯಲ್ಲಿ ನಿಗದಿಪಡಿಸಿ, ಸರಕಾರದ ಒಪ್ಪಿಗೆ ಕೋರಿದಲ್ಲಿ ಒಪ್ಪಿಗೆ ನೀಡಲಾಗುವುದು.

ತರೀಕೆರೆ ಪಟ್ಟಣದಲ್ಲಿ ಬಸ್‌ನಿದ್ದಾಣದ ನಿರ್ಮಾಣ ಕಾರ್ಯ

ಶ್ರೀ ಬಿ. ಬಿ. ನಿಂಗಯ್ಯ (ಮೂಡಿಗೆರೆ).— ಮಾನ್ಯ ಅಧ್ಯಕ್ಷರೇ, ತರೀಕೆರೆ, ಪಟ್ಟಣಕ್ಕೆ ಕರ್ನಾಟಕ ಸಾರಿಗೆ ಸಂಸ್ಥೆಯವರು ಬಸ್ ನಿಲ್ದಾಣವನ್ನು ನಿರ್ವಿಸಲು ೧೯೮೬ರಲ್ಲಿ ಶಂಕುಸ್ಥಾಪನೆ ಮಾಡಲಾಗಿದೆ. ಶಂಕುಸ್ಥಾಪನೆ ಮಾಡಿದನಂತರ ಇದರ ಕಟ್ಟಡದ ನಿರ್ಮಾಣ ಯಾವ ಹಂತದಲ್ಲಿದೆ. ಈ ಬಸ್ ನಿಲ್ದಾಣದ ಅಂದಾಜಿನ ಹಣವೆಷ್ಟು ? ಈಗ ನಮಗೆ ತಿಳಿದಿರುವಂತೆ ಈ ಬಸ್ ನಿಲ್ದಾಣದ ಅಂದಾಜು ವೆಚ್ಚವನ್ನು ಅರ್ಧ ಭಾಗ ಕಡಿಮೆ ಮಾಡಲು ಆದೇಶ ನೀಡಿದ್ದರೆಂದು ತಿಳಿದು ಬಂದಿದೆ. ಇದು ಸರಿಯೇ ತಿಳಿಸಿ. ಕಡಿಮೆ ಮಾಡಲು ಕಾರಣವೇನು ? ಈ ಒಂದು ಕಟ್ಟಡದ ನಿರ್ಮಾಣವನ್ನು ಒಂದು ವರ್ಷದೊಳಗೆ ಪೂರ್ಣ ಮಾಡುವುದಾಗಿ ಭರವಸೆ ಕೊಟ್ಟಿದ್ದೀರಿ, ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರನ್ನು ಕೇಳಬಹುತ್ತೇನೆ ?

ಶ್ರೀ ಎಂ. ರಘುಪತಿ (ಮಿನುಗಾರಿಕೆ ಮತ್ತು ಬಂದರು ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಉತ್ತರ ತರಿಸಿಕೊಡಲಾಗುವುದು ಎಂದು ತಿಳಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್. —ಗೈರು ಹಾಜರಾಗಿದ್ದರು